# ಜಯ ಮಂಗಳಂ - ಮಧು ಕೈಟಭಾಸುರ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
4. **Note:** Lyrics mentioned here are as per Ref. 1. The wordings in Ref. 2 are similar to Ref. 1. But there are few differences which are not considered here. In Ref. 3, the wordings are slightly different, which are also not considered here.
5. **Note:** Singer has mostly followed these lyrics.

ರಾಗ: ಸುರುಟಿ          ತಾಳ: ಅಟ

ಜಯ ಮಂಗಳಂ ನಿತ್ಯ ಶುಭ ಮಂಗಳಂ    || ಪ ||

ಮಂಗಳ ಮಧು ಕೈಟ ಭಾಸುರ ಮರ್ದನಗೆ
ಮಂಗಳ ಮದನ ಕೋಟಿ ಲಾವಣ್ಯಗೆ
ಮಂಗಳ ಜಗದಂತರಂಗ ಕೃಪಾಂಗಗೆ
ಮಂಗಳ ಯದುಕುಲೋತ್ತಮ ಸಾರ್ವಭೌಮಗೆ    || 1 ||

ಶ್ರೀವತ್ಸ ಲಾಂಛನಗೆ ಸಿರಿ ದೇವಿಯರಸಗೆ
ಗೋವರ್ಧನೋದ್ಧಾರ ಗೋವಿಂದಗೆ
ಮಾವ ಕಂಸನ ಕೊಂದ ಮಕರ ಕುಂಡಲಧರಗೆ
ಭಾವಜನಯ್ಯ ಚಿನ್ಮಯ ಮೂರ್ತಿಗೆ    || 2 ||

ಅಂಬುಜನಾಭಗೆ ಅಖಿಳ ಲೋಕೇಶಗೆ
ಶಂಭು -ಅಜ - ಸುರ – ಮುನಿ ವಂದ್ಯ ಹರಿಗೆ

ಎಂಬತ್ತುನಾಲ್ಕು ಲಕ್ಷ ಜೀವರಾಶಿಗಳ
ಬೊಂಬೆಯ ಮಾಡಿ ಕುಣಿಸುವ ದೇವಗೆ ॥ 3 ॥

ಸಕಲ ಗುಣ ಪೂರ್ಣಗೆ ಸರ್ವ ಸ್ವಾತಂತ್ರ್ಯಗೆ
ಅಕಳಂಕ ಆದಿ ನಿರ್ದೋಷ ಹರಿಗೆ
ಭಕುತ ವತ್ಸಲನಿಗೆ ಭವರೋಗ ವೈದ್ಯಗೆ
ನಿಖಿಳ ಜೀವ ದಯಾ ಪರಿಪೂರ್ಣಗೆ ॥ 4 ॥

ಪನ್ನಗ ಶಯನಗೆ ಪಾವನ ಮೂರ್ತಿಗೆ
ಸನ್ನುತಾನಂತ ಸದ್ಗುಣ ಭರಿತಗೆ
ಎನ್ನೊಡೆಯ ಪುರಂದರ ವಿಠಲ ರಾಯಗೆ
ತನ್ನ ನಂಬಿದವರ ಸಲಹುವ ಮೂರ್ತಿಗೆ ॥ 5 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಮಧು ಕೈಟ ಭಾಸುರ ಮರ್ದನ** – ಪ್ರಳಯಕಾಲದಲ್ಲಿ ವಟಪತ್ರಶಾಯಿಯಾಗಿ ಮಲಗಿದ್ದ ವಿಷ್ಣುವಿನ ಕಿವಿಯ ಕೊಳೆಯಿಂದ ಹುಟ್ಟಿದ ಅಸುರರು ಮಧು – ಕೈಟಭರು. ಹುಟ್ಟಿದೊಡನೆ ವಿಷ್ಣುವಿನ ನಾಭಿಕಮಲದಲ್ಲಿದ್ದ ಬ್ರಹ್ಮನನ್ನು ಕಾಡತೊಡಗಿದರು. ಬ್ರಹ್ಮನ ಮೊರೆಯನ್ನು ಕೇಳಿ ವಿಷ್ಣು ಅವರನ್ನು ಕೊಂದನು. ಶಿವ ಪುರಾಣ, ಕಾಳಿಕಾಪುರಾಣಗಳಲ್ಲಿ ಈ ಕತೆಯಿದೆ.

**ಸ್ಮರಕೋಟಿ ಲಾವಣ್ಯ** – ಕೋಟಿಸಂಖ್ಯೆಯ ಮನ್ಮಥರಷ್ಟು ಚೆಲುವ.

**ಜಗದಂತರಂಗ** – ಜಗತ್ತಿನ ಅಂತರ್ಯಾಮಿ.

**ಶ್ರೀವತ್ಸ ಲಾಂಛನ** – ಶ್ರೀವತ್ಸವೆನ್ನುವುದು ವಿಷ್ಣುವಿನ ಆಭರಣ ವಿಶೇಷ.

**ಭಾವಜಾರಿ ಪ್ರಿಯ** – ಭಾವಜನೆಂದರೆ ಮನ್ಮಥ; ಅವನಿಗೆ ಶತ್ರು ಶಿವ (ಮದನ ದಹನದ ಕತೆ); ಶಿವನಿಗೆ ಪ್ರಿಯನಾದವನು.

**ಬೊಂಬೆಗಳ ಮಾಡಿ** – ತಾನೇ ಸ್ವತಂತ್ರನಾದರೂ, ಜೀವರಿಂದ ಅವರವರ ಸ್ವರೂಪ ಯೋಗ್ಯತಾನುಸಾರವಾಗಿ ಕರ್ಮಗಳನ್ನು ಮಾಡಿಸುವವನು, ಕರ್ಮಫಲಗಳನ್ನು ಅನುಭವಿಸುವಂತೆ ಮಾಡುವವನು.

**Classification:** Keerthane
**Ankita:** purandara vittala
**Location:** NA
**Category:** Bhakti, mangala song, Krishna stuti
**Sub-Category:** mangala, asura, madhu, manmatha, Lakshmi, kamsa, govinda, Krishna, muni, jiva, deva, purna, bhava, Vaidya, roga, daya, loka, sura, brahma,
**Pravachana:** NA
**Explanation:** NA